**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂಃ231/2020</u> ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **25.03.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**<u>ಪಾಟಿ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಟಿ.ಎಂ.ಎಸ್ ವಕೀಲರಿಂದಃ</u>**

ನನಗೆ ಕನ್ನಡ ಭಾಷೆ ಓದಲು ಹಾಗೂ ಬರೆಯಲು ಬರುತ್ತದೆ.

ನಾನು ಪಾಲಿಕೆಯವರು ನೀರಿನ ಸಂಪ್‌ಗೆ ಸಂಬಂಧಿಸಿದಂತೆ ನನಗೆ ತೊಂದರೆ ನೀಡುತ್ತಿದ್ದಾರೆ ಎಂದು ಅವರ ವಿರುದ್ಧ ದಾವೆ ಹಾಕಿರುತ್ತೇನೆ. 2 ನೀರಿನ ಸಂಪ್‌ಗಳು ಇದ್ದು, ಅವು ಅಕ್ಕಪಕ್ಕದಲ್ಲಿ ಇರುತ್ತವೆ. ಸದರಿ ನೀರಿನ ಸಂಪ್ ಗಳು 4 ಅಡಿ ಅಗಲ ಹಾಗೂ 5 ಅಡಿ ಆಳ ಇರುತ್ತದೆ. ಸದರಿ ಸಂಪ್ ಗಳನ್ನು ಮುಚ್ಚಿ 1 ½ ಅಡಿ ಅಗಲದ ಮುಚ್ಚಳ ಮಾಡಿರುತ್ತೇವೆ. ಸಾಮಾನ್ಯವಾಗಿ ಓಡಾಡುವ ರಸ್ತೆಯಲ್ಲಿ ನೀರಿನ ಸಂಪ್ ಇದ್ದರೇ ವಾಹನ ಚಲಾಯಿಸಲು ಆಗುವುದಿಲ್ಲ ಎಂದರೆ ಸರಿ. ನಾನು ಈ ದಾವೆಯನ್ನು ಸಂಪ್ ಗೆ ಸಂಬಂಧಿಸಿದಂತೆ ಮಾತ್ರ ಹಾಕಿರುತ್ತೇನೆ. ದಾವೆಯ ಷೆಡ್ಯೂಲ್ ನಲ್ಲಿ ಸಂಪ್ ಇರುವ ವಿಚಾರವನ್ನು ತಿಳಿಸಿರುವುದಿಲ್ಲ.

ದಾವಾ ಆಸ್ತಿಯ ಪೂರ್ವ-ಪಶ್ಚಿಮ 52 ಅಡಿ, ಉತ್ತರ-ದಕ್ಷಿಣ 38 ಅಡಿ ಇರುತ್ತದೆ. ಸದರಿ ಅಳತೆಯ ಸ್ವತ್ತು ನನಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಸದರಿ ವಿಸ್ತೀರ್ಣದ ಆಸ್ತಿಯಲ್ಲಿ ನನಗೆ ಹಕ್ಕು ಬಂದಿರುತ್ತದೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ, ಯಾವ ದಾಖಲೆಗಳು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯು ಡಿಮಾಂಡ ರಿಜಿಸ್ಟರ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅಳತೆಯ ವಿಸ್ತೀರ್ಣದ ಆಸ್ತಿ ನನಗೆ ಸೇರಿರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನಾನು ಆರ್.ಆರ್.ಸಿ ಮನೆಯನ್ನು ನಿರ್ಮಿಸಿರುತ್ತೇನೆ. ನಮ್ಮ ಆಸ್ತಿಗೆ ನಾವು ಕಂಪೌಡ ಗೋಡೆಯನ್ನು ನಿರ್ಮಿಸಿರುವುದಿಲ್ಲ. ನಮ್ಮ ಮನೆಯ ಬಾಗಿಲು ಪೂರ್ವ ದಿಕ್ಕಿಗೆ

ಇರುತ್ತದೆ. ನಮ್ಮ ಮನೆಯ ಮುಂದೆ ರಸ್ತೆ ಇರುವುದಿಲ್ಲ, ಆದರೆ ತಿರುಗಾಡುವ ಗಲ್ಲಿ ಇರುತ್ತದೆ. ಸದರಿ ಬೀದಿಯಲ್ಲಿ ಸುಮಾರು 4 ಮನೆಗಳು ಇರುತ್ತವೆ. 2 ನೇ ಪ್ರತಿವಾದಿಯ ಮನೆ ನಮ್ಮ ಮನೆಯ ಉತ್ತರ ದಿಕ್ಕಿಗೆ ಇರುತ್ತದೆ. ನೀರಿನ ಸಂಪ್ ನಮ್ಮ ಮನೆಯ ಜಾಗದಲ್ಲಿ ಮುಂಭಾಗದಲ್ಲಿ ಇರುತ್ತದೆ. ನಮ್ಮ ಮನೆಗೆ ಸಂಬಂಧಿಸಿದಂತೆ ಪ್ರತಿವಾದಿಗಳು ಯಾವುದೇ ರೀತಿ ಗಲಾಟೆ ಮಾಡಿರುವುದಿಲ್ಲ. ನಮ್ಮ ಮನೆಯನ್ನು ಪುರಸಭೆಯವರಿಂದ ಅಳತೆ ಮಾಡಿಸಿ ದಾಖಲೆ ಮಾಡಿಸಿಕೊಂಡಿರುತ್ತೇನೆ. ಸದರಿ ಮನೆಯನ್ನು ನಾನೇ ಕಟ್ಟಿಸಿರುತ್ತೇನೆ. ಸದರಿ ಮನೆ ಕಟ್ಟಲು ಪಾಲಿಕೆಯಿಂದ ಪರವಾನಿಗೆ ಪಡೆದಿರುತ್ತೇನೆ. ಪರವಾನಿಗೆ ಪಡೆಯುವ ಸಮಯದಲ್ಲಿ ಆಸ್ತಿಗೆ ಸಂಬಂಧಿಸಿದಂತೆ ನಾನು ಪಾಲುಪಾರೀಕತ ನೀಡಿರುತ್ತೇನೆ. ಈ ದಾವಾ ಆಸ್ತಿಯು ಸದರಿ ಪಾಲು ವಿಭಾಗ ಪತ್ರದಲ್ಲಿ ನನ್ನ ತಂದೆಯ ಪಾಲಿಗೆ ಬಂದಿರುತ್ತದೆ. ನಾನು ಹೇಳಿದ ವಿಸ್ತೀರ್ಣದ ಆಸ್ತಿ ನನ್ನ ತಂದೆಯವರು ಪಾಲಿಗೆ ಬಂದಿರುತ್ತದೆ ಎಂದು ತೋರಿಸಲು ಪಾಲು ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ಸಾರ್ವಜನಿಕರು ಹಾಗೂ 2 ನೇ ಪ್ರತಿವಾದಿಯು ಸಾರ್ವಜನಿಕ ರಸ್ತೆಯಲ್ಲಿ ಸಂಪ್ ನಿರ್ಮಿಸಿರುತ್ತಾರೆ ಎಂದು ದೂರು ನೀಡಿದ್ದ ಮೇರೆಗೆ ಪುರಸಭೆಯವರು ಸ್ಥಳಕ್ಕೆ ಬಂದು ಪರಿಶೀಲಿನೆ ಮಾಡಿ ಸದರಿ ನೀರಿನ ಸಂಪ್ ರಸ್ತೆಯಲ್ಲಿ ಇರುತ್ತದೆ ಎಂದು ನಿಪಿ-1 ರಂತೆ ನೋಟಿಸ್ ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟಿಸ್ ನೀಡಿದ ನಂತರ ನಾನು ನನ್ನ ಆಸ್ತಿಯನ್ನು ಅಳತೆ ಮಾಡಿಸಿರುವುದಿಲ್ಲ. ಸದರಿ ಸಂಪ್ ತೆರವುಗೊಳಿಸಲು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ನೋಟಿಸಿಗೆ ನಾನು ನಿಪಿ-2 ರಂತೆ ಪ್ರತ್ಯುತ್ತರ ನೀಡಿರುತ್ತೇನೆ ಎಂದರೆ ಸರಿ. ನನ್ನ ಪ್ರತ್ಯುತ್ತರದಲ್ಲಿ ನಾನು 1969 ರಲ್ಲಿ ಮನೆ ನಿರ್ಮಿಸಿದ್ದ ನಂತರ ಯಾವುದೇ ಕಾಮಗಾರಿ ಹಾಗೂ ದುರಸ್ಥಿ ಕೈಗೊಂಡಿರುವುದಿಲ್ಲ, ಕೇವಲ ಸುಣ್ಣ ಬಣ್ಣ ಮಾಡಿಸಿರುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ.

ನಾನು ಈ ದಾವೆಯಲ್ಲಿ ಮನೆ ರಿಪೇರಿ ಮಾಡಿಸಲು ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆ ಎಂದು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ-1 ರಂತೆ ನೋಟಿಸ

ನೀಡಿದ ನಂತರ ನೀರಿನ ಸಂಪ್ ತೆರವುಗೊಳಿಸಿರುವುದಿಲ್ಲ ಎಂದು ಪುರಸಭೆಯವರು ನಿಪಿ-3 ರಂತೆ ಮತ್ತೊಂದು ನೋಟಿಸ ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟಿಸಿನಲ್ಲಿ ಪುರಸಭೆಯವರು ದಿನಾಂಕ 09.09.2020 ರಂದು ಮಧ್ಯಾಹ್ನ 12 ಗಂಟೆಗೆ ಸ್ಥಳ ಪರಿಶೀಲಿನೆಗೆ ಹಾಜರು ಇರಲು ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ದಿನ ನಾನು ಸ್ಥಳ ಪರಿಶೀಲಿನೆಗೆ ಹಾಜರು ಇದ್ದೆನು. ದಿನಾಂಕ 09.09.2020 ರಂದು ಪುರಸಭೆಯವರು ಬಂದು ಅಳತೆ ಮಾಡಿರುತ್ತಾರೆ ಸಾಕ್ಷಿ ಮುಂದುವರಿದು ಸರಿಯಾಗಿ ಅಳತೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ನಾನು ಪುರಸಭೆಯವರಿಗೆ ಅಳತೆ ಮಾಡಲು ಬಿಟ್ಟಿರುವುದಿಲ್ಲ ಹಾಗೂ ನ್ಯಾಯಾಲಯದಲ್ಲಿ ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಪುರಸಭೆಯವರು ಸ್ಥಳ ಪರೀಶಿಲಿನೆ ಮಾಡಿ ನೀರಿನ ಸಂಪ್ ಸಾರ್ವಜನಿಕ ರಸ್ತೆಯಲ್ಲಿ ಇರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ-6 ರಲ್ಲಿ ಆಸ್ತಿಯ ಅಳತೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ-7 ಕಚ್ಚಾ ನಕಾಶೆಯನ್ನು ನಾನು ಹೇಳಿದಂತೆ ನನ್ನ ವಕೀಲರು ತಯಾರಿಸಿರುತ್ತಾರೆ. ಸದರಿ ದಾಖಲೆಯನ್ನು ನಾನು ಹೇಳಿದಂತೆ ವಕೀಲರು ತಯಾರಿಸಿದ್ದು, ಸದರಿಯವರು ಸ್ಥಳಕ್ಕೆ ಬಂದಿರುವುದಿಲ್ಲ. ನಿಪಿ-8 ರಿಂದ 11 ನ್ನು ಮನೆಯ ಮುಂದೆ ಕಾಣುವ ಕೆಂಪು ಬಣ್ಣದ ಪಡಸಾಲೆ ಜಾಗ 2 ಅಡಿ ಅಗಲ ಇರುತ್ತದೆ. ಸದರಿ ಪಡಸಾಲೆ ಮುಂದೆ ನೀರಿನ ಸಂಪ್ ಗಳು ಇರುತ್ತವೆ ಎಂದರೆ ಸರಿ. ಪೂರ್ವ ದಿಕ್ಕಿನಲ್ಲಿ ಮನೆಯ ಅಡಿಪಾಯ 3 ಆಳದಲ್ಲಿ ಇರುತ್ತದೆ. ಸದರಿ ನೀರಿನ ಸಂಪ್ ಸಾರ್ವಜನಿಕ ರಸ್ತೆಯ ಜಾಗದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. 4 ಅಡಿ ಅಗಲದ ನೀರಿನ ಸಂಪ್ ಒಳಗೊಂಡಂತೆ ನಮ್ಮ ಆಸ್ತಿಯು 52 X 38 ಅಡಿ ಇರುತ್ತದೆ. ನಾನು ಹೇಳಿದಂತೆ ನನ್ನ ಆಸ್ತಿಯು 52 X 38 ಅಡಿ ಇರುವುದಿಲ್ಲ ಎಂದರೆ ಸರಿಯಲ್ಲ. ಆಕಾರಣದಿಂದ ನಾನು ಸದರಿ ವಿಸ್ತೀರ್ಣದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಪೂರ್ವ ದಿಕ್ಕಿನಲ್ಲಿ ವಾಹನಗಳು ಓಡಾಡುತ್ತವೆ ಎಂದರೆ ಸರಿ. ನಾನು ಹಾಜರುಪಡಿಸಿದ್ದ ನಿಪಿ-8 ರಿಂದ ನಿಪಿ-10 ರಲ್ಲಿ ಕಾಣುವ ಕೆಂಪು ಬಣ್ಣದ ಕಾರ್ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಇರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯ ಮನೆ ಶಿಥಿಲವಾಗಿರುತ್ತದೆ ಎಂದರೆ ಸರಿ.

<u>ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**